# ಕರ್ನಾಟಕ ಭೂಸೇನಾ ನಿಗಮ ನಿಯಮಿತ

ಚಿನ್ನಸ್ವಾಮಿ ಕ್ರೀಡಾಂಗಣ, ಬೆಂಗಳೂರು.

ಸಂ.ಕಭೂಸೇನಾ/ಮಾಹಅ/2005–06 ದಿನಾಂಕ:03–02–2006

## ಅಧಿಸೂಚನೆ

ವಿಷಯ: ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005ರ ಪ್ರಕಾರ ಕ್ರಮ ಜರುಗಿಸುವ ಬಗ್ಗೆ ಸೂಚನೆಗಳು.

ಉಲ್ಲೇಖ: ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005 (2005ರ ಕೇಂದ್ರ ಕಾಯ್ದೆ ಸಂಖ್ಯೆ:22)

* * *

ರಾಜ್ಯದಲ್ಲಿ ನಾಗರೀಕರಿಗೆ ಮಾಹಿತಿ ಪಡೆಯುವ ಅವಕಾಶದ ಹಕ್ಕಿಗಾಗಿ ಒಂದು ಶಾಸನವನ್ನು ರಚಿಸುವುದು ಅಗತ್ಯವೆಂದು ಮನಗಂಡು "ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005" (2005ರ ಕೇಂದ್ರ ಕಾಯ್ದೆ ಸಂಖ್ಯೆ:22)ಅನ್ನು ಜಾರಿಗೊಳಿಸಲಾಗಿದೆ. ಈ ಅಧಿನಿಯಮವನ್ನು ದಿನಾಂಕ:21–06–2005ರ ಭಾರತ ಸರ್ಕಾರದ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಲಾಗಿದ್ದು, ಈ ಅಧಿನಿಯಮದ ಪ್ರಕಾರದ ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಕ್ರಮ ಜರುಗಿಸಬೇಕಾಗಿದೆ. ಈ ಅಧಿನಿಯಮದ ಪ್ರಾಧಿಕಾರ ಆಯಾ ಕಛೇರಿ / ಸಂಸ್ಥೆಗಳನ್ನು ಸಾರ್ವಜನಿಕ ಪ್ರಾಧಿಕಾರಿಗಳೆಂದು ಗುರುತಿಸಿ, ಸದರಿ ಅಧಿನಿಯಮ ಸೆಕ್ಷನ್ 5(1)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆಯಾ ಕಛೇರಿ/ಸಂಸ್ಥೆಗಳಿಗೆ "ಸಾರ್ವಜನಿಕ ಮಾಹಿತಿ ಅಧಿಕಾರಿ" ಹಾಗೂ ಸೆಕ್ಷನ್ 5(2)ರ ಅಡಿಯಲ್ಲಿ "ಸಹಾಯಕ ಸಾರ್ವಜನಿಕ ಮಾಹಿತಿ" ಅಧಿಕಾರಿ ಎಂದು ನೇಮಕ ಮಾಡಬೇಕಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಆಡಳಿತ ವ್ಯಾಪ್ತಿಗೆ ಒಳಪಡುವ ಕರ್ನಾಟಕ ಭೂಸೇನಾ ನಿಗಮ ನಿಯಮಿತ, ಬೆಂಗಳೂರು, ಕೇಂದ್ರ ಕಛೇರಿ ಇಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿ, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರವನ್ನು ಗುರುತಿಸಿ ಕರ್ನಾಟಕ ಸರ್ಕಾರವು ಸಂ:ಗ್ರಾಅಪ/324/ಕೆಎಸ್ಎಸ್/2005 ಬೆಂಗಳೂರು, ದಿನಾಂಕ:23–09–2005ರಲ್ಲಿ ಅಧಿಸೂಚನೆ ಜಾರಿ ಮಾಡಿರುತ್ತದೆ.

ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005ರ (ಕೇಂದ್ರ ಕಾಯ್ದೆ 22/2005) ಸೆಕ್ಷನ್5(1)5(2) ಮತ್ತು 19(1)ರಲ್ಲಿ ಸಹಿತವಾಗಿರುವ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಭೂಸೇನಾ ನಿಗಮ ನಿಯಮಿತ, ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಲಯ/ವಿಭಾಗ/ಉಪವಿಭಾಗದ ಕಛೇರಿಗಳಿಂದ ಮಾಹಿತಿಯನ್ನು ಕೋರುವ ವ್ಯಕ್ತಿಗಳು ಸಲ್ಲಿಸುವ ಅರ್ಜಿಗಳನ್ನು ಅಥವಾ ಮೇಲ್ಮನವಿಗಳನ್ನು ಸ್ವೀಕರಿಸಿ ಕೋರಿದ ಮಾಹಿತಿಯನ್ನು ನೀಡುವ / ಇತ್ಯರ್ಥಪಡಿಸುವ ಸಲುವಾಗಿ ಈ ಕೆಳಕಂಡ ಅಧಿಕಾರಿಗಳನ್ನು ಅನುಕ್ರಮವಾಗಿ ಸಾರ್ವಜನಿಕ ಮಾಹಿತಿ ಅಧಿಕಾರಿ, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ.

| ಕ್ರ. ಸಂ. | ಸಂಸ್ಥೆಗಳು (ಸಾರ್ವಜನಿಕ ಪ್ರಾಧಿಕಾರ) | ಸಾರ್ವಜನಿಕ ಮಾಹಿತಿ ಅಧಿಕಾರಿ | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ | ಮೇಲ್ಮನವಿ ಪ್ರಾಧಿಕಾರ |
|---|---|---|---|---|
| 1 | 2 | 3 | 4 | 5 |
| 1. | ರಾಜ್ಯದ ಎಲ್ಲಾ 22 ವಿಭಾಗ ಮತ್ತು 64 ಉಪ ವಿಭಾಗದ ಕಛೇರಿಗಳು | ರಾಜ್ಯದ ಎಲ್ಲಾ ವಿಭಾಗಗಳ ಉಪ ನಿರ್ದೇಶಕರುಗಳು ಅಥವಾ ಪ್ರಾಜೆಕ್ಟ್ ಡೈರೆಕ್ಟರ್‌ಗಳು | ರಾಜ್ಯದ ಎಲ್ಲಾ ಉಪ ವಿಭಾಗಗಳ ಸಹಾಯಕ ನಿರ್ದೇಶಕರುಗಳು ಅಥವಾ ಪ್ರಾಜೆಕ್ಟ್ ಎಕ್ಸಿಕ್ಯೂಟಿವ್‌ಗಳು | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಭೂಸೇನಾ ನಿಗಮ ನಿಯಮಿತ, ಬೆಂಗಳೂರು. |

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಭೂಸೇನಾ ನಿಗಮ, ಬೆಂಗಳೂರು.

ಗೆ,

1. ಪ್ರಧಾನ ವ್ಯವಸ್ಥಾಪಕರು (ಕಾಮಗಾರಿ) ಕರ್ನಾಟಕ ಭೂಸೇನಾ ನಿಗಮ, ಬೆಂಗಳೂರು.
2. ಎಲ್ಲಾ ಜಂಟಿ/ಉಪ/ಸಹಾಯಕ ನಿರ್ದೇಶಕರುಗಳು, ಕರ್ನಾಟಕ ಭೂಸೇನಾ ನಿಗಮ.

**ಪ್ರತಿಯನ್ನು:**

- ಅಧ್ಯಕ್ಷರು, ಕರ್ನಾಟಕ ಭೂಸೇನಾ ನಿಗಮ, ಬೆಂಗಳೂರು ಇವರಿಗೆ ಮಾಹಿತಿಗೆ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.
- ನಿರ್ದೇಶಕರು, ಸ್ವ–ಉದ್ಯೋಗ ಕಾರ್ಯಕ್ರಮಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ–ಇವರ ಮಾಹಿತಿಗೆ ಸಲ್ಲಿಸಲಾಗಿದೆ.